ಪ. ರಾಮಕೃಷ್ಣ ಶಾಸ್ತ್ರಿ

ಕಲೆ: ಗಣೇಶ ಆಚಾರ್ಯ



# ದೊರೆ ಮತ್ತು ಹಕ್ಕಿಗಳು

ಹಪೋಸ್ ಎಂಬ ದೊರೆಗೆ ಪ್ರಜೆಗಳ ಹಿತಕ್ಕಿಂತ ಮಿಗಿಲಾದುದು ಯಾವುದೂ ಇರಲಿಲ್ಲ. ರಾಜನಾಗಿದ್ದರೂ ಸುಪ್ಪತ್ತಿನ ಹಾಸಿಗೆಯಲ್ಲಿ ಮಲಗುತ್ತಿರಲಿಲ್ಲ, ಮೃಷ್ಟಾನ್ನ ಭೋಜನ ಮಾಡುತ್ತಿರಲಿಲ್ಲ. ತನ್ನ ಪ್ರಜೆಗಳಂತೆ ಸರಳ ಜೀವನ ನಡೆಸುತ್ತಿದ್ದ.

ಒಂದು ದಿನ ದೊರೆಯು ಪ್ರಜೆಗಳ ಕಷ್ಟ ಸುಖ ತಿಳಿದುಕೊಳ್ಳಲು ಕುದುರೆಯನ್ನೇರಿ ಪ್ರಯಾಣ ಬೆಳೆಸಿದ. ನೆತ್ತಿಯ ಮೇಲೆ ಸೂರ್ಯ ಪ್ರಖರವಾಗಿ ಉರಿಯುತ್ತಿದ್ದ. ದೊರೆಗೆ ಬಾಯಾರಿಕೆಯಾಯಿತು. ಕುಡಿಯಲು ಎಲ್ಲಿಯೂ ನೀರು ಕಾಣಿಸಲಿಲ್ಲ. ದಣಿವಿನಿಂದ ಕಣ್ಣಿಗೆ ಕತ್ತಲೆ ಬಂದಿತು. ಕುದುರೆಯ ಮೇಲೆ ಹಾಗೆಯೇ ಒರಗಿಕೊಂಡ. ದೊರೆಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಕುದುರೆಯು ತಟಸ್ಥವಾಗಿ ನಿಂತುಕೊಂಡಿತು. ತುಂಬ ಹೊತ್ತು ಕಳೆದಾಗ ದೊರೆ ಕಣ್ತೆರೆದು ಒಂದು ಅಚ್ಚರಿಯನ್ನು ನೋಡಿದ. ನೂರಾರು ಹಕ್ಕಿಗಳು ರೆಕ್ಕೆಗಳನ್ನು ಬಿಡಿಸಿ ನಿಂತು ಅವನ ಮೈಮೇಲೆ ಸೂರ್ಯನ ಬಿಸಿಲು ಸೋಕದ ಹಾಗೆ ನೆರಳು ನೀಡಿದ್ದವು. ಒಂದು ಹಕ್ಕಿ ಸೋರೆ ಬುರುಡೆಯಲ್ಲಿ ತುಂಬಿಸಿ ತಂದ ನೀರನ್ನು ಅವನ ಬಾಯಿಗೆ ಹೊಯ್ಯುತ್ತ ಇತ್ತು.

ದೊರೆಯು ಹಕ್ಕಿಗಳನ್ನು ನೋಡಿ ಸಂತೋಷದಿಂದ, 'ಹಕ್ಕಿಗಳಾದರೂ ದೇವರು ನಿಮ್ಮ ಹೃದಯದಲ್ಲಿ ಅಪಾರ ಕರುಣೆಯನ್ನು ತುಂಬಿದ್ದಾನೆ. ನೀವು ಇಂದು ನನ್ನ ನೆರವಿಗೆ ಬರದೆ ಹೋಗಿದ್ದರೆ ನಾನು